ಸಮೀಕ್ಷೆ ನಂತರ ಇಲ್ಲಿಯವರೆಗೂ ವಿವಿಧ ವಸತಿ ಯೋಜನೆಗಳಲ್ಲಿ 1022908 ಮನೆಗಳನ್ನು ಹಾಗು 21248 ನಿವೇಶನಗಳನ್ನು ನೀಡಲಾಗಿರುತ್ತದೆ

ಆ) ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಜಮೀನು ಲಭ್ಯವಿಲ್ಲದಿದ್ದ ಸಂದರ್ಭದಲ್ಲಿ ಖಾಸಗಿ ಜಮೀನು ಕೊಂಡುಕೊಳ್ಳಲು ಅವಕಾಶವಿದ್ದು ಇಂತಹ ಸಂದರ್ಭದಲ್ಲಿ ಮಾರ್ಗಸೂಚಿ ಬೆಲೆ +20% ರಷ್ಟು ಹೆಚ್ಚಳದಲ್ಲಿ ಜಮೀನು ಖರೀದಿಗೆ ಅವಕಾಶ ಕಲ್ಪಿಸಲಾಗಿದೆ

ಇ) ಪ್ರತಿ ವರ್ಷವೂ ಈ ಬಗ್ಗೆ ಗುರಿ ಇಟ್ಟುಕೊಳ್ಳಲಾಗಿದ್ದು ಅದರಂತೆ ಫಲಾನುಭವಿಗಳಿಗೆ ಪೂರ್ಣ ಪ್ರಮಾಣದ ಸೌಲಭ್ಯ ಕಲ್ಪಿಸಲಾಗುವುದು

ಶ್ರೀ ನಿಂಗಪ್ಪ ಹೆಚ್ (ಕುಣಿಗಲ್)119(225)

ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

1) ತುಮಕೂರು ಸರ್ಕಾರಿ ಮುದ್ರಣಾಲಯದಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದು ಸರ್ಕಾರಕ್ಕೆ ಭಾರಿ ಪ್ರಮಾಣದ ನಷ್ಟ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

2) ಬಂದಿದ್ದಲ್ಲಿ, ಪೂರ್ಣ ಪ್ರಮಾಣದ ತನಿಖೆ ನಡೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ,

3) ಮುದ್ರಣಾಲಯದಲ್ಲಿರುವ ಲಕ್ಷಾಂತರ ರೂಪಾಯಿ ಬೆಲೆಬಾಳುವ ಯಂತ್ರಗಳು ಧೂಳು ತಿನ್ನುತ್ತಿದ್ದು ಖಾಸಗಿಯವರಿಗೆ ಗುತ್ತಿಗೆ ನೀಡಿ ಅವರು ತಯಾರಿಸುತ್ತಿರುವ ಪುಸ್ತಕಗಳ ಮೇಲೆ ಸರ್ಕಾರಿ ಮುದ್ರಣಾಲಯದ ಹೆಸರು ನಮೂದಿಸುತ್ತಿರುವುದು ಗಮನಕ್ಕೆ ಬಂದಿದೆಯೇ?

4) ಬಂದಿದ್ದಲ್ಲಿ, ಖಾಸಗಿ ಗುತ್ತಿಗೆ ರದ್ದುಪಡಿಸಿ ಹಿಂದಿನ ವ್ಯವಸ್ಥೆಯನ್ನೇ ಮರುಸ್ಥಾಪಿಸಿ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರು ಬೀದಿ ಪಾಲಾಗುವುದನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ,

5) ಖಾಸಗಿ ಗುತ್ತಿಗೆ ನೀಡಿರುವುದನ್ನು ವಿರೋಧಿಸಿ ಅಲ್ಲಿಯ ನೌಕರರು ಸುಮಾರು ದಿನಗಳಿಂದ ನರಂತರ ಧರಣಿ ನಡೆಸುತ್ತಿದ್ದು ಅವರ ಬೇಡಿಕೆ ಈಡೇರಿಸಲು ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುವುದೇ?

ಶ್ರೀ ಎಸ್ ಬಸವರಾಜ ಹೊರಟ್ಟಿ

1) ಬಂದಿದೆ

2) ಮುಂದಿನ ಕ್ರಮ ವಹಿಸಲಾಗುವುದು

3) ಸರ್ಕಾರಿ ಜಿಲ್ಲಾ ಮುದ್ರಣಾಲಯ ತುಮಕೂರಿನಲ್ಲಿ ಲಭ್ಯವಿರುವ ಸಿಬ್ಬಂದಿಗಳಿಗೆ ಹಾಗೂ ಕೆಲಸದ ಒತ್ತಡಕ್ಕೆ ತಕ್ಕಂತೆ ಯಂತ್ರೋಪಕರಣಗಳನ್ನು ಚಾಲನೆಯಲ್ಲಿ ಇಡಲಾಗಿರುತ್ತದೆ ಪಠ್ಯಪುಸ್ತಕಗಳನ್ನು ಈ ಮುದ್ರಣಾಲಯ ದಿಂದಲೇ ಮುದ್ರಿಸಿ ಸರಬರಾಜು ಮಾಡಲಾಗಿರುತ್ತದೆ 2007–08ನೇ ಸಾಲಿನಲ್ಲಿ ಸಮಯದ ಅಭಾವದಿಂದ ಮತ್ತು ಸಿಬ್ಬಂದಿ ಕೊರತೆಯಿಂದ PÉ® ¸À 20®PÀ ¥ÀæªÀÄÄR ¸ÀA¸ÉÜAiÀÄ°è K T P P Act ಅನ್ವಯ ಟೆಂಡರ್ ಕರೆದು ಖಾಸಗಿ ಮುದ್ರಕರಿಂದ ಮುದ್ರಿಸಿ ಸರಬರಾಜು ಮಾಡಲಾಗಿರುತ್ತದೆ

4) K T P P Act ಅನ್ವಯ ಟೆಂಡರ್ ಕರೆದು ಮಾನವ ಶಕ್ತಿ ಏಜೆನ್ಸಿ ಮೂಲಕ ಮಾತ್ರ ತುಂಡು ಗುತ್ತಿಗೆ ನೌಕರರನ್ನು ನೇಮಕ ಮಾಡಿಕೊಳ್ಳಲಾಗಿದೆ ಆದ್ದರಿಂದ ಈ ನೌಕರರು ಮಾನವ ಶಕ್ತಿ ಏಜೆನ್ಸಿಗೆ ಸಂಬಂದಿಸಿರುವುದ ವರಾಗಿದ್ದು, ಬೀದಿ ಪಾಲಾಗುವ ಪ್ರಶ್ನೆ ಉದ್ಭವಿಸುವುದಿಲ್ಲ

5) ಈ ಎಲ್ಲಾ ತುಂಡು ಗುತ್ತಿಗೆ ನೌಕರರನ್ನು ಮಾನವ ಶಕ್ತಿ ಏಜೆನ್ಸಿಯು ತೆಗೆದುಕೊಂಡಿದ್ದು ಸರ್ಕಾರಕ್ಕೆ ಸಂಬಂದವಿರುವುದಿಲ್ಲ ಹಾಗಾಗಿ ಇವರುಗಳ ಬೇಡಿಕೆಗಳನ್ನು ಈಡೇರಿಸಲು ಸರ್ಕಾರವು ಕ್ರಮ ಕೈಗೊಳ್ಳುವ ಅವಶ್ಯಕತೆ ಇರುವುದಿಲ್ಲ